ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ , ಮೂಡಿಗೆರೆ

**ಸಿ.ಸಿ.ನಂಬರ್.228/2022**

| | | |
|---|---|---|
| ಆರೋಪಿಯ ಹೆಸರು | : | ಶ್ರೀಮತಿ ಅರ್ಪಿತ ಕೆ.ಐ ಯಾನೆ ಮಂಜುಳಾ ಯಾನೆ ಹರಿಣಾಕ್ಷಿ |
| ಗಂಡನ ಹೆಸರು | : | ಅನೀಲ್ ಕುಮಾರ್ |
| ವಯಸ್ಸು | : | 34 ವರ್ಷ |
| ಉದ್ಯೋಗ | : | ಗೃಹಿಣಿ |
| ವಾಸ ಸ್ಥಳ | : | ವಿಜಯಲಕ್ಷ್ಮಿ ನಿಲಯ, ಕುವೆಂಪು ಪಾರ್ಕ್ ಹಿಂಭಾಗ, ಕೋಟೆ, ಕುವೆಂಪು ನಗರ, ಚಿಕ್ಕಮಗಳೂರು. |
| ದಿನಾಂಕ | : | 08.04.2026 |

**ದಂಡ ಪ್ರಕ್ರಿಯ ಸಂಹಿತೆ ಕಲಂ 313 ರನ್ವಯ ಆರೋಪಿಯ ವಿಚಾರಣೆಃ**

| | |
|---|---|
| ಪ್ರಶ್ನೆ ನಂ.1<br>ಉತ್ತರಃ | ನೀವು ಪಿರ್ಯಾದಿಯು ಮಂಡಿಸಿದ ಸಾಕ್ಷ್ಯವನ್ನು ಕೇಳಿರುವಿರಲ್ಲವೇ ? |
| ಪ್ರಶ್ನೆ ನಂ.2<br><br>ಉತ್ತರಃ | ಪ್ರಾ.ಸಾ.1 ರಾಘವೇಂದ್ರ ಎಂ.ಸಿ ರವರು ತಮ್ಮ ಸಾಕ್ಷ್ಯದಲ್ಲಿ ಆರೋಪಿಯಾದ ನೀವು ಅವರಿಗೆ 15 ವರ್ಷಗಳಿಂದ ಪರಿಚಿತರಾಗಿದ್ದು ಆ ಪರಿಚಯದ ಆಧಾರದ ಮೇಲೆ ನಿಮ್ಮ ತುರ್ತು ಕುಟುಂಬದ ಅಗತ್ಯತೆಗಾಗಿ ಜನವರಿ 2020 ರಂದು 2 ಲಕ್ಷ ಹಣವನ್ನು ನೀಡುವಂತೆ ಅವರನ್ನು ಕೇಳಿದ್ದೀರಿ ಎಂದು ಸಾಕ್ಷ್ಯ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ ? |
| ಪ್ರಶ್ನೆ ನಂ.3 | ಪ್ರಾ.ಸಾ.1 ರವರು ಮುಂದುವರೆದು ತನ್ನ ಸಾಕ್ಷ್ಯದಲ್ಲಿ ನುಡಿಯುವುದೇನೆಂದರೆ, ನಿಮ್ಮ ಕೋರಿಕೆಯಂತೆ 2 ಲಕ್ಷ ಹಣವನ್ನು ಜನವರಿ 2020 ರ ಮೊದಲ ವಾರದಲ್ಲಿ ಕೈ ಸಾಲವಾಗಿ ನೀಡಿದ್ದು, ಸದರಿ ಹಣವನ್ನು ಡಿಸೆಂಬರ್ 2020 ರ ಒಳಗೆ ಪಾವತಿಸುವುದಾಗಿ ನೀವು ತಿಳಿದ್ದೀರಿ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ ? |
| ಉತ್ತರಃ | |
| ಪ್ರಶ್ನೆ ನಂ.4 | ಪ್ರಾ.ಸಾ.1 ರವರು ಮುಂದುವರೆದು ತನ್ನ ಸಾಕ್ಷ್ಯದಲ್ಲಿ ನುಡಿಯುವುದೇನೆಂದರೆ ನಿಮ್ಮ ಮಾತಿನಂತೆ ಡಿಸೆಂಬರ್ 2020 ರಂದು ನಿಮ್ಮನ್ನು ಭೇಟಿ ಮಾಡಿ 2 ಲಕ್ಷ ಹಣವನ್ನು ಮರುಪಾವತಿಸುವಂತೆ ನಿಮ್ಮನ್ನು ಕೇಳಿದಾಗ ನೀವು, 2 ಲಕ್ಷ ಹಣಕ್ಕೆ |

| | |
|---|---|
| | ಸಂಬಂಧಿಸಿದಂತೆ ದಿಃ 28.12.2020 ರ ಕೆನರಾ ಬ್ಯಾಂಕು, ಚಿಕ್ಕಮಗಳೂರಿನ ಕೋಟೆ ಶಾಖೆಯ ಚೆಕ್ಕು ಸಂಖ್ಯೆ 814187 ಅನ್ನು ಅವರಿಗೆ ನೀಡಿದ್ದೀರಿ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಿ ? |
| ಉತ್ತರಃ | |
| ಪ್ರಶ್ನೆ ನಂ.5 | ಪ್ರಾ.ಸಾ.1 ರವರು ಮುಂದುವರೆದು ತನ್ನ ಸಾಕ್ಷ್ಯದಲ್ಲಿ ನುಡಿಯುವುದೇನೆಂದರೆ ಸದರಿ ಚೆಕ್ಕನ್ನು ತಾನು ಖಾತೆ ಹೊಂದಿದ ಕರ್ನಾಟಕ ಬ್ಯಾಂಕು ಬಣಕಲ್ ಶಾಖೆಗೆ ನಗದೀಕರಣಕ್ಕಾಗಿ ಹಾಜರು ಪಡಿಸಿದ್ದು, ಸದರಿ ಚೆಕ್ಕು " Dormant" ಎಂಬ ದಿನಾಂಕ 02.01.2021 ರ ಹಿಂಬರಹದೊಂದಿಗೆ ವಾಪಸ್ಸು ಬಂದಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ? |
| ಉತ್ತರಃ | |
| ಪ್ರಶ್ನೆ ನಂ.6 | ಪ್ರಾ.ಸಾ.1 ರವರು ಮುಂದುವರೆದು ತನ್ನ ಸಾಕ್ಷ್ಯದಲ್ಲಿ ನುಡಿಯುವುದೇನೆಂದರೆ ಚೆಕ್ಕು ಅಮಾನ್ಯಗೊಂಡ ಬಗ್ಗೆ ತಮ್ಮ ಗಮನಕ್ಕೆ ತಂದರು ಕೂಡ ತಾವು ಸದರಿ ಹಣವನ್ನು ಮರುಪಾವತಿ ಮಾಡದ ಕಾರಣ ದಿನಾಂಕಃ 19.01.2021 ರ ನೊಂದಾಯಿತ ಅಂಚೆಯ ಮೂಲಕ ತಮಗೆ ವಕೀಲರ ನೋಟೀಸನ್ನು ಕಳುಹಿಸಿದ್ದು, ಸದರಿ ನೋಟೀಸು ತಮಗೆ ಜಾರಿಯಾದರು ಸಹ ನೀವು ಚೆಕ್ಕಿನಲ್ಲಿ ನಮೂದಿಸಿರುವ ಹಣವನ್ನು ಅವರಿಗೆ ಪಾವತಿಸಲಿಲ್ಲ ಮತ್ತು ದಿಃ 06.02.2021 ರಂದು ಸುಳ್ಳು ಪ್ರತ್ಯುತ್ತರ ನೋಟೀಸನ್ನು ನೀಡಿರುತ್ತೀರಿ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ? |
| ಉತ್ತರಃ | |
| ಪ್ರಶ್ನೆ ನಂ.7 | ಪ್ರಾ.ಸಾ.1 ರವರು ಮುಂದುವರೆದು ತನ್ನ ಸಾಕ್ಷ್ಯದಲ್ಲಿ ನುಡಿಯುವುದೇನೆಂದರೆ ನಿ.ಪಿ.1 ಚೆಕ್ಕನ್ನು ಮತ್ತು ಅದರಲ್ಲಿ ಇರುವ ಸಹಿಯನ್ನು ನಿ.ಪಿ.1(ಎ) ಎಂದು ಗುರುತಿಸಿ, ಬ್ಯಾಂಕಿನವರು ನೀಡಿರುವ ಹಿಂಬರಹವನ್ನು ನಿ.ಪಿ.2 ರಂತೆ, ವಕೀಲರ ನೋಟೀಸನ್ನು ನಿ.ಪಿ.3 ರಂತೆ, ಅಂಚೆ ರಸೀದಿಯನ್ನು ನಿ.ಪಿ.4 ರಂತೆ ಮತ್ತು ನೋಟೀಸು ನಿಮಗೆ ಜಾರಿಯಾದ ಬಗ್ಗೆ ಅಂಚೆ ಸ್ವೀಕೃತಿಯನ್ನು ನಿ.ಪಿ.5 ರಂತೆ ಮತ್ತು ಪ್ರತ್ಯುತ್ತರ ನೋಟೀಸನ್ನು ನಿ.ಪಿ.6 ರಂತೆ ಗುರುತಿಸಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ? |
| ಉತ್ತರಃ | |
| ಪ್ರಶ್ನೆ ನಂ.8 | ಪ್ರಾ.ಸಾ.1 ರವರು ಮುಂದುವರೆದು ತನ್ನ ಸಾಕ್ಷ್ಯದಲ್ಲಿ ನುಡಿಯುವುದೇನೆಂದರೆ ಆರೋಪಿಯಾದ ನೀವು ಮೋಸ ಮಾಡಬೇಕೆಂಬ ಉದ್ದೇಶದಿಂದ ಅವರಿಗೆ ಆ ಚೆಕ್ಕನ್ನು ನೀಡಿದ್ದೀರಿ, ಆದ್ದರಿಂದ ನೀವು ಕಲಂ 138 N.I. Act ಕಾಯ್ದೆ ಅಡಿ ಅಪರಾಧವನ್ನು ಎಸೆಗಿದ್ದೀರಿ, ಆದ್ದರಿಂದ ನಿಮ್ಮ ಮೇಲೆ ಕ್ರಮ ಕೈಗೊಳ್ಳಬೇಕೆಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ? |
| ಉತ್ತರಃ | |

| | |
|---|---|
| ಪ್ರಶ್ನೆ ನಂ.9<br>ಉತ್ತರಃ | **ಈ ಬಗ್ಗೆ ನೀವೇನಾದರೂ ಹೆಚ್ಚಿಗೆ ಹೇಳುವುದಿದೆಯಾ** ? |
| ಪ್ರಶ್ನೆ ನಂ.10<br>ಉತ್ತರಃ | ನಿಮ್ಮ ಪರವಾಗಿ ಪ್ರತಿರಕ್ಷೆ ಇದೆಯಾ ? |

ಮೇಲಿನ ಹೇಳಿಕೆಯನ್ನು ಆರೋಪಿಯ ಹಾಜರಾತಿಯಲ್ಲಿ ಆತನಿಗೆ ತಿಳಿದ ಭಾಷೆಯಲ್ಲಿ ಓದಿ ಹೇಳಿ ಆತ ನೀಡಿದ ಯಥಾವತ್ತು ಉತ್ತರವನ್ನು ನನ್ನ ಸಮಕ್ಷಮದಲ್ಲಿ ತೆಗೆದುಕೊಳ್ಳಲಾಯಿತು ಮತ್ತು ಹೇಳಿಕೆಯನ್ನು ಆರೋಪಿಯ ಸಂಪೂರ್ಣ ಮತ್ತು ಸತ್ಯವಾದ ಹೇಳಿಕೆಯೆಂದು ನಾನು ದೃಢೀಕರಿಸುತ್ತೇನೆ.

Sd/-
(ಪ್ರಕಾಶ್ ಪಿ.ಎಂ.)
ಹಿರಿಯ ಸಿವಿಲ್ ಮತ್ತು ಜೆ.ಎಂಎಫ್‌ಸಿ ನ್ಯಾಯಾಧೀಶರು
ಮೂಡಿಗೆರೆ